# ಆಹಾ ಸುದ್ದಿ!

★ ★ ಸಸಿತೋಟ



ಕೇಂಬ್ರಿಜ್‌ನಲ್ಲಿ ಇಗ್ ನೊಬೆಲ್ ಪ್ರಶಸ್ತಿ ಪ್ರದಾನದ ಸಂಭ್ರಮ ನೋಡಿ. ಪ್ರಧಾನ ಭಾಷಣಕಾರನ ಮೇಲೆ ಸ್ಪಾಟ್‌ಲೈಟ್ ನೋಡಿ. ಇದು ಮಾನವ ಸ್ಪಾಟ್‌ಲೈಟ್. ಅಂದರೆ ಟಾರ್ಚ್‌ಲೈಟ್. ಕಾಲಹರಣ ಮಾಡಲು ಇಷ್ಟವಿಲ್ಲದ ಕುಡುಮಿಗಳು ಚಿತ್ರವಿಚಿತ್ರ ಸಂಶೋಧನೆ ಮಾಡಿ ಈ ಪ್ರಶಸ್ತಿ ಗೆಲ್ಲುವುದು ವಾಡಿಕೆ. ಐಫೆಲ್ ಗೋಪುರ ಎಡಕ್ಕೆ ವಾಲಿದ್ದಕ್ಕೇ ಚಿಕ್ಕದಾಗಿ ಕಾಣುತ್ತದೆ. ಬಲಕ್ಕೆ ವಾಲಿದ್ದರೆ..? ಅದು ಮುಂದಿನ ವರ್ಷದ ಸಂಶೋಧನೆಯ ವಸ್ತು. ನಾವು ಕೂಗಿದ್ದು ನಮಗೇ ಕೇಳದಂತೆ ಮಾಡುವ ಜಾಮರ್.. ಖಡ್ಗವನ್ನು ನುಂಗಿದರೆ ಆಗುವ ಅಡ್ಡ ಪರಿಣಾಮಗಳು... ಎಲ್ಲಾ ಬೃಹಸ್ಪತಿಗಳೇ.

ನೀ ಬಿಟ್ಟರೂ ನಾ ಬಿಡೆ ಎನ್ನುವ ಛಾತಿ ಈ ಎದೆಗಾತಿಯದು. ಓರ್ಯಾಕಲ್ ಕಾರ್ಪೊರೇಶನ್ನಿನ ಮಾಜಿ ಅಧ್ಯಕ್ಷ ಚಾರ್ಲಸ್ ಫಿಲಿಪ್ಸ್‌ನ ಮಾಜಿ ಪ್ರೇಯಸಿ ಯಾವಾಯುಷ್ಣಿ ವಿಲ್ಕಿನ್ಸ್ 'ದಿ ಗ್ಲಾಮರಸ್ ಲೈ' ಸಾಕ್ಷ್ಯಚಿತ್ರದ ಮೂಲಕ ಆತನ ಇತರ ರಾಸಲೀಲೆಗಳನ್ನು ಬಹಿರಂಗಗೊಳಿಸಲು ಹೊರಟಿದ್ದಾಳೆ. ಎರಡು ವರ್ಷಗಳ ಹಿಂದೆ 2.43 ಲಕ್ಷ ಡಾಲರ್ ಖರ್ಚು ಮಾಡಿ ಚಾರ್ಲಸ್‌ನ ಖಾಸಗಿ ರಹಸ್ಯಗಳನ್ನು ಬಯಲು ಮಾಡುವ ಜಾಹೀರಾತು ಫಲಕಗಳನ್ನು ಈ ಅಗ್ನಿಕನ್ಯೆ ಟೈಮ್ಸ್ ಸ್ಕ್ವೇರ್ ಸೇರಿದಂತೆ ಎಲ್ಲೆಡೆ ಹಾಕಿದ್ದಳು. ಚಿತ್ರ ಬಿಡುಗಡೆಗೆ ಸಂಬಂಧಿಸಿದಂತೆ ಈಗ ಕೋರ್ಟ್‌ನಲ್ಲಿ ಹಗ್ಗ ಜಗ್ಗಾಟ ನಡೆದಿದೆ.



ಜಪಾನೀಯರು ರೊಬಾಟ್ ತಯಾರಿಕೆಯಲ್ಲಿ ಸಿದ್ಧಹಸ್ತರು. ಮಲಗುವ ಮನೆಯೂ ಸೇರಿದಂತೆ ಎಲ್ಲಡೆ ಎಂಟ್ರಿ ಕೊಟ್ಟ ರೊಬಾಟ್ ಕ್ಯಾಬರೆ ಕೇಂದ್ರಕ್ಕೆ ಕಾಲಿಡದಿದ್ದರೆ ಹೇಗೆ! ಟೋಕಿಯೋದ 'ರೊಬಾಟ್ ರೆಸ್ಟೋರೆಂಟ್'ನಲ್ಲಿ ಸಣ್ಣನೆಯ ದೇಹದ ಜಪಾನಿ ಹುಡುಗಿಯರನ್ನು ನೋಡಿ ನೋಡಿ ಬೇಸತ್ತ ಗ್ರಾಹಕರನ್ನು ಈಗ ರೊಬಾಟ್ (ಳ) ಬಿಚ್ಚಿದೆದೆ ಬೆಚ್ಚಿ ಬೀಳಿಸುತ್ತಿದೆಯಂತೆ. ಕೈಯಾಡಿಸಿ ವೈಯ್ಯಾರ ಮಾಡುವ ರೊಬಾಟ್ ಗ್ರಾಹಕರು ಎಸೆಯುವ ನೋಟುಗಳನ್ನು ಹೆಕ್ಕಲು ಯಾವಾಗ ಕಲಿಯುತ್ತೋ!



ಇಂಗ್ಲೆಂಡ್‌ನ ಕುರಿ ಫಾರ್ಮ್‌ನ ನಾಯಿ ಜೆಸ್ ತಾಯಿಯನ್ನು ಕಳೆದುಕೊಂಡು ಅನಾಥವಾದ ಕುರಿಮರಿಗಳಿಗೆ ಆಯಾ ಕೆಲಸವನ್ನು ಮುಫತ್ತಾಗಿ ವಹಿಸಿಕೊಂಡಿದೆ. ರಚ್ಚೆ ಹಿಡಿದು ಓಡುವ ಮರಿಯ ಹಿಂದೆ ಓಡುತ್ತ ಬಾಟಲ್‌ನಲ್ಲಿ ಹಾಲು ಕುಡಿಸುವ ಜೆಸ್ ಫಾರ್ಮ್ ಒಡೆಯ ಲೂಯಿಸ್‌ನ ನಿಜವಾದ ಆಸ್ತಿಯಂತೆ. ಆಯಾಗಳಿಗೆ ಕೈತುಂಬ ರೊಕ್ಕ ಕೊಡಲು ಸಾಧ್ಯವಿಲ್ಲದ ತಾಯಂದಿರು ಕೂಸುಗಳ ದೇಖರಿಕೆಗೆ ಜೆಸ್ ಅಂತಹ ನಾಯಿಯ ಕಾಲುಗಳ ಮೊರೆ ಹೋಗಬಹುದು.

ಅಮೆರಿಕಾದ ಓಹಿಯೋ ಜೈಲಿನಲ್ಲಿ ಮರಣದಂಡನೆ ಶಿಕ್ಷೆಗೆ ಒಳಗಾಗಿರುವ ರೋನಾಲ್ಡ್ ಪೋಸ್ಟ್ 480 ಪೌಂಡ್‌ನ ಭಾರಿ ವಜನ್ನಿನ ದೇಹ ಹೊತ್ತು ಬದುಕಲೇ ಕಷ್ಟಪಡುತ್ತಿದ್ದಾನೆ. ಸಾಯುವುದು ಇನ್ನೂ ಕಷ್ಟವಂತೆ. ಮರಣ ದಂಡನೆ ಜಾರಿ ಮಾಡುವಾಗ ಆತನಿಗೆ ದೈಹಿಕ, ಮಾನಸಿಕ ನೋವಾಗುತ್ತದೆ, ಹೀಗಾಗಿ ಶಿಕ್ಷೆ ರದ್ದು ಮಾಡಿ ಎಂಬುದು ಆತನ ವಕೀಲರ ವಾದ. ಪೋಸ್ಟ್‌ನನ್ನು ನೇಣು ಹಾಕಿದರೆ ಹಗ್ಗ ತುಂಡಾಬಹುದು ಎಂಬ ಭಯವೂ ಇಲ್ಲಿ ಇಲ್ಲ. ಏಕೆಂದರೆ ಓಹಿಯೋದಲ್ಲಿ ವಿಷದ ಚುಚ್ಚುಮದ್ದು ಕೊಟ್ಟು ಸಾಯಿಸುತ್ತಾರಂತೆ. ಸಿರಿಂಜ್ ಸೂಜಿಯೇ ಮುರಿದುಹೋದರೆ...? ಇಲ್ಲ, ಸೂಕ್ತ ರಕ್ತನಾಳವೇ ಸಿಗದಿದ್ದರೆ..?



ಸರಿಯಾಗಿ 80 ವರ್ಷಗಳ ಹಿಂದೆ ನ್ಯೂಯಾರ್ಕ್‌ನ ರಾಕ್ ಫೆಲ್ಲರ್ ಕೇಂದ್ರದಲ್ಲಿ ಏನಾಗಿತ್ತು? ಕಟ್ಟಡ ಕಟ್ಟುವ ಕಾರ್ಮಿಕರು 800 ಅಡಿ ಮೇಲೆ ಕಬ್ಬಿಣದ ತೊಲೆಯ ಮೇಲೆ ಕಾಲಾಡಿಸುತ್ತ ಊಟ ಮಾಡಿದರು. 'ಗಗನಚುಂಬಿ ಕಟ್ಟಡದ ಮೇಲೆ ಭೋಜನ' ಎಂದೇ ಈ ಚಿತ್ರ ದಾಖಲಾಯಿತು. ದಾಖಲೆವೀರರು ಆಗಲೂ ಇದ್ದರು ಎಂದು ಈಗಿನ ದಾಖಲೆ ಹುಚ್ಚರು ಮುಗುಮ್ಮಾಗಿ ಹೇಳಲಡ್ಡಿಯಿಲ್ಲ.